ಯಲಹಂಕದಲ್ಲಿನ ಗುಡಿಸಲುಗಳ ನೆಲಸಮ ಮಾಡಿರುವ ಬಗ್ಗೆ

೧೫೩೦ ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ.

(ಅ) ಯಲಹಂಕದಲ್ಲಿ ನೆಲಸಮ ಮಾಡಲಾದ ಗುಡಿಸಲುಗಳ ಸಂಖ್ಯೆ ಎಷ್ಟು ಹಾಗೂ ನೆಲಸಮ ಮಾಡಲು ಕಾರಣಗಳೇನು ?

(ಆ) ಇದರಿಂದ ತೊಂದರೆಗೀಡಾದ ಕುಟುಂಬಗಳ ಸಂಖ್ಯೆ ಎಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು) ಅವರಿಗೆ ಸರ್ಕಾರದವರು ಬದಲಿ ವ್ಯವಸ್ಥೆ ಮಾಡಿದ್ದಾರೆಯೇ,

(ಇ) ಸದರಿ ಕುಟುಂಬಗಳಿಗೆ ಮರದಡಿಯಲ್ಲಿ ವಾಸಿಸಲೂ ಸಹ ಅಡ್ಡಿಪಡಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

(ಈ) ಹಾಗಿದ್ದಲ್ಲಿ ಅವರಿಗೆ ಪುನರ್‌ವಸತಿ ಕಲ್ಪಿಸಲು ಕೈಕೊಂಡ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—

(ಅ) ಯಲಹಂಕ ಪುರಸಭೆ ಎಲ್ಲೆಯಲ್ಲಿ ಬಗರ್‌ಹುಕುಂ ಕಟ್ಟಲಾಗಿದ್ದ ಹತ್ತು ಗುಡಿಸಲುಗಳನ್ನು ತೆಗೆಯಲಾಗಿರುತ್ತೆ. ಅವುಗಳು ರಸ್ತೆಗೆ ಅಡಚಣೆಯಾಗಿದ್ದುದರಿಂದ, ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆ ಆಗಿತ್ತು.

(ಆ) ಹತ್ತು ಕುಟುಂಬಗಳಿಗೆ ತೊಂದರೆ ಆಗಿರುತ್ತೆ, ಅವರಿಗೆ ಬದಲಿ ವ್ಯವಸ್ಥೆಗಾಗಿ ಪುರಸಭೆಯು ಕೇಂದ್ರ ೧೫ ಹಣದಿಂದ ತಲಾ ೧೦೦ ರೂಪಾಯಿಗಳನ್ನು ಕೊಟ್ಟಿರುತ್ತೆ.

(ಇ) ಇಲ್ಲ.

(ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಎಲೆಕ್ಟ್ರಾನಿಕ್ ನಗರದ ಸ್ಥಾಪನೆಯ ಕುರಿತಂ

೧೫೩೬. ಶ್ರೀ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಕರ್ನಾಟಕದಲ್ಲಿ ಎಲೆಕ್ಟ್ರಾನಿಕ್ ನಗರ ಸ್ಥಾಪಿಸಬೇಕೆಂಬ ಸರ್ಕಾರದವರ ಯೋಜನೆ ಕಾರ್ಯಗತ ವಾಗಿದೆಯೆ ? ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ ಮತ್ತು ಇದಕ್ಕೆ ತಗಲಿರುವ ಅಂದಾಜು ವೆಚ್ಚವೆಷ್ಟು ?

(ಆ) ಕೆಯೋನಿಕ್ಸ್ ಸಂಸ್ಥೆ ಕಳೆದ ೩ ವರ್ಷಗಳಲ್ಲಿ ಆರ್ಥಿಕವಾಗಿ ಲಾಭದಾಯಕವಾಗಿದೆಯೇ ಹಾಗೂ ಆದರೆ ಲಾಭ ನಷ್ಟ ವಿನು?

(ಇ) ೧೯೮೫ರಲ್ಲಿ ಈ ಸಂಸ್ಥೆಗೆ ಸಿಬ್ಬಂದಿ ಆಯ್ಕೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) ಹೌದು, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಲಿಯವರಿಂದ ಸ್ವಾಧೀನಪಡಿಸಿಕೊಂಡ ೩೧೦ ಎಕರೆ ಜಮೀನಿನ ಪೈಕಿ ೨೬೦ ಎಕರೆ ಜಮೀನನ್ನು ವಿವಿಧ ಆಳತೆಗಳ ಪ್ಲಾಟುಗಳನ್ನು ಹಂಚಿಕೆಗಾಗಿ ಅಭಿವೃದ್ಧಿಪಡಿಸಿ ಉಳಿದ ಜಮೀನನ್ನು ರಸ್ತೆ ನಿರ್ಮಾಣ, ಚರಂಡಿ ಇತ್ಯಾದಿಗಳಿಗಾಗಿ ಬಿಟ್ಟಿದೆ. ಈ ಯೋಜನೆಗಾಗಿ ತಗಲಿರುವ ಅಂದಾಜು ವೆಚ್ಚ ೬೫.೪೦ ಲಕ್ಷ ರೂಪಾಯಿಗಳು